ಶ್ರೀ ಎಂ. ವಿ. ಕೃಷ್ಣಪ್ಪ.—ಅಪ್-ಟು-ಡೇಟ್ ಕೇಳಿದ್ದಾರೆ. ಇಷ್ಟು ಬಾಕಿ ಇದೆ, ಇಷ್ಟು ರೈಟ್ ಆಫ್ ಮಾಡಲಾಗಿದೆ ಎಂದು ಹೇಳಿದೆ ಇದರಲ್ಲಿ 4-6 ವರ್ಷದ್ದು ಸೇರಿದೆ 7-8 ವರ್ಷದ್ದು ಸೇರಿದೆ ಆ ವಿವರ ನನ್ನ ಹತ್ತಿರ ಇಲ್ಲ.

ಶ್ರೀ ಎ. ಕೃಷ್ಣಶೆಟ್ಟಿ.—ದಕ್ಷಿಣ ಕನ್ನಡ ಜಿಲ್ಲೆಯಿಂದ ಕಳೆದ ವರ್ಷದ್ದುಸ್ವಲ್ಪ ಮಾಫಿ ಮಾಡ ಬೇಕು. ಮತ್ತೆ ಸರ್ಚಾರ್ಜ್ ಮಾಡಿದ್ದು ಹೆಚ್ಚಾಗಿದೆ ಆದನ್ನು ಕಡಿಮೆ ಮಾಡಬೇಕು ಎಂದು ಹೇಳಿ ಸರ್ಕಾರಕ್ಕೆ ಮನವಿ ಬಂದಿದೆಯೇ ? ಬಂದಿದ್ದರೆ ರಿಯಾಯತಿ ತೋರಿಸದೇ ಇರಲು ಕಾರಣವೇನು ?

ಶ್ರೀ ಎಂ. ವಿ. ಕೃಷ್ಣಪ್ಪ.—ಎಲ್ಲೆಲ್ಲಿ ಅದರ ಅವಶ್ಯಕತೆ ಇದೆಯೋ ಅಲ್ಲಿ ಮಾಡುತ್ತೇವೆ. ಸಾಧಾರಣ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದೇವರು ಬಹಳ ಮಳೆಯನ್ನು ಕೊಡುತ್ತಾನೆ, ಅಲ್ಲಿ ಮೊದಲನೆ ಮಳೆ ಜೂನ್‌ನಲ್ಲೆ ಪ್ರಾರಂಭವಾಗಿ ಬೇಕಾದಷ್ಟು ಬರುತ್ತದೆ. ಮೈಸೂರು ಸಂಸ್ಥಾನದಲ್ಲಿ ಮೊದಲನೆ ಬೆಳೆ ಅಲ್ಲಿಂದರೇ ಪ್ರಾರಂಭವಾಗುವುದು. ರೈತರು ಬೆಳೆ ಬಂದಾಗ ಕಂದಾಯ ಕೊಡುವುದೂ ಕೂಡ ಅಲ್ಲಿಂದಲೇ ಪ್ರಾರಂಭವಾಗುವುದು, ಬೇರೆ ಜಿಲ್ಲೆಗಳಲ್ಲಿ ರೈತರಿಗೆ ಬೆಳೆ ಬಂದಾಗ ಮದುವೆ, ಮುಂಜಿ ಸೀಸನ್ ಶುರುವಾಗುತ್ತದೆ, ಬಹುಮಟ್ಟಿಗೆ ಮದುವೆ ಮುಂಜಿಗೆ ಖರ್ಚು ಮಾಡಿಬಿಡುತ್ತಾರೆ.

Sri C. J. MUCKANNAPPA.—May I draw the attention of the Chair that the Hon'ble Minister is giving an answer since integration in some districts, *i.e.*, 8 to 10 years. But the question is very clear and information regarding the amount written off or waived under the two heads during the last three years ?

Mr. SPEAKER.—It may be written off during the last three years, but the accumulation will be during the prior years.

Sri C J. MUCKANNAPPA.—To my Hon'ble friend Sri Gopala Gowda's question, the Hon'ble Minister gave information for 10 years.

ಶ್ರೀ ಎಂ. ವಿ. ಕೃಷ್ಣಪ್ಪ.—ಕಂದಾಯ ಬಾಕಿ ಇರುವುದನ್ನು ಅಪ್-ಟು-ಡೇಟ್ ಕೊಟ್ಟಿದ್ದಾರೆ ರೈಟಿಂಗ್ ಆಫ್ ಒಂದು ವರ್ಷದ್ದು ಅಲ್ಲ. ಎರಡು ಮೂರು ವರ್ಷದ್ದು ಇದೆ.

ಶ್ರೀ ಬಿ. ಭಾನ್ಕರಶೆಟ್ಟಿ.—ಭೂಕಂದಾಯ ಮತ್ತು ನರ್‌ಚಾರ್ಜು ಎರಡೂ ಬಾಕಿ ಬರಬೇಕಾಗಿದೆ. ತೋದನಲ ಭೂಕಂದಾಯ ಡಬ್ಬಲ್ ಮಾಡಿದ್ದೀರಿ. ಸುಮಾರು ಮೂರು ಕೋಟಿ ಎಂದು ಹೇಳಿದ್ದೀರಿ. ಇನ್ನು ಎರಡು ಕೋಟಿ ಜಾಸ್ತಿಯಾಗುತ್ತದೆ. ಆದ್ದರಿಂದ ನರ್‌ಚಾರ್ಜು ಮಾಫಿ ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಸರ್ಕಾರಕ್ಕೆ ಯಾವುದು ರಾಜದಾಯಕವಾದುದು ಎಂದು ಆಲೋಚನೆ ಮಾಡಿ ಆ ರೀತಿ ಮಾಡುತ್ತೇವೆ.

ಶ್ರೀ ಎಸ್. ವಿ. ರಾಮೇಗೌಡ.—ಕೋಲಾರ ಜಿಲ್ಲೆಯಲ್ಲಿ ಸುಮಾರು ಎರಡು ವರ್ಷ ಬೆಳೆ ಆಗದೇ ಇರುವುದರಿಂದ ಕೋಲಾರ ಜಿಲ್ಲೆಯ ಮಟ್ಟಿಗೆ ಪೂರ್ತಿ ಕಂದಾಯ ವಜಾಮಾಡುವ ಆಲೋಚನೆ ಮಾಡಿದ್ದೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅನೇಕ ಜಿಲ್ಲೆಗಳಲ್ಲಿ ಅಭಾವ ಪರಿಸ್ಥಿತಿ ಇರುತ್ತದೆ. ಸರ್ಕಾರ ರೈತರಿಗೆ ತೊಂದರೆಯಾಗದ ಹಾಗೆ ಎಷ್ಟೆಷ್ಟು ಸಸ್‌ಪೆನ್‌ಷನ್ ಮಾಡಬೇಕು ಎಷ್ಟೆಷ್ಟು ರೆಮಿಷನ್ ಮಾಡಬೇಕು ಎನ್ನುವ ಯೋಚನೆ ಮಾಡುತ್ತಿದ್ದಾರೆ. ಕೋಲಾರದ ಮಟ್ಟಿಗೆ ಅಲ್ಲ, ಎಲ್ಲೆಲ್ಲಿ ಅಭಾವ ಪರಿಸ್ಥಿತಿ ಇದೆಯೋ ಆ ಪ್ರದೇಶಗಳ ವಿಚಾರ ಎಲ್ಲಾ ಆಲೋಚನೆ ಮಾಡುತ್ತಿದ್ದಾರೆ.

Hospitals run by Government to treat the poor people.

*Q.—159. Sri A. J. DODDAMETI (Ron).—

Will the Government be pleased to state :—

(*a*) the number of hospitals in the State which are run by the Government to treat the poor people free of cost ;

(*b*) the names of places where such hospitals are located ;

(*c*) the expenditure incurred by each such hospital per year ?

A.—Sri K. NAGAPPA ALVA (Minister for Health).—

(*a*) 59 hospitals.
(*b*) and (*c*) *Vide* List appended.

List showing the Names of Hospitals which are run by Government together with location, expenditure, etc. (under the Administrative Control of Medical Department).

Sl. No.	Names	Location	Expenditure for 1962–63
1	2	3	4
	1. Bangalore District—10.		
			Rs.
1	Victoria Hospital ...	Bangalore	15,25,648
2	Vani Vilas Hospital ...	do	7,97,200
3	K. C. General Hospital ...	do	3,26,645
4	Mental Hospital ...	do	6,46,610
5	Minto Ophthalmic Hospital ...	do	3,30,662
6	S.D.S. Sanatorium ...	do	5,75,450
7	Bowring & Lady Curzon Hospitals ...	do	12,72,939
8	H.S.I.S. Gosha Hospital ...	do	1,44,744
9	T.B. Sanatorium, Old Madras Road...	do	2,12,573
10	Isolation Hospital, do ...	do	1,09,369
	2. Bellary District—4.		
11	Headquarters Hospital ...	Bellary	4,50,735
12	Women and Children Hospital ...	do	
13	Wellesley T.B. Sanatorium ...	do	2,78,624
14	Government Hospital ...	Hospet	43,367
	3. Belgaum District—2.		
15	Civil Hospital ...	Belgaum	3,91,881
16	Cottage Hospital ...	Saundatti	68,482
	4. Bidar District—1.		
17	Civil Hospital ...	Bidar	1,18,173
	5. Bijapur District—3.		
18	Civil Hospital ...	Bijapur	2,37,024
19	Cottage Hospital ...	Bagalkot	37,867
20	P.W. Hospital ...	Jamakhandi	42,914

1	2	3	4
	6. Chickmagalur District—1.		
21	Mallegowda Hospital	... Chickmagalur	2,50,744
	7. Chitradurga District—3.		
22	Chigateri General Hospital	... Davangere	1,74,630
23	T.B. Hospital	... do	43,213
24	Civil Hospital	... Chitradurga	2,31,662
	8. Coorg District—4		
25	Civil Hospital	... Mercara	4,33,603
26	Women and Children Hospital	... do	
27	Civil Hospital	... Somwarpet	1,23,324
28	Civil Hospital	... Virajpet	1,57,435
	9. Dharwar District—4.		
29	Karnatak Medical College Hospital	... Hubli	10,04,996
30	Civil Hospital	... Dharwar	2,53,154
31	Mental Hospital	... do	2,25,682
32	Cottage Hospital	... Haveri	73,136
	10. Gulbarga District—2.		
33	Civil Hospital	... Gulbarga	2,11,612
34	Zanana Hospital	... do	
	11. Hassan District—3.		
35	Sri Chamarajendra Hospital	... Hassan	1,68,439
36	J. C. R. Hospital	... Arsikere	46,963
37	Crawford Hospital	... Saklespur	1,28,658
	12. Kolar District—5.		
38	Civil Hospital	... K. G. F.	1,30,745
39	Maternity Hospital	... do	1,10,784
40	Epidemic Diseases Hospital	... do	27,113
41	Sri S. N. R. Hospital	... Kolar	1,72,003
42	K. N. T. B. Sanatorium	... do	2,15,134
	13. Mandya District—1.		
43	General Hospital	... Mandya	2,01,123

(SRI K. NAGAPPA ALVA)

1	2	3	4
	14. Mysore District—4.		
44	Krishnarajendra Hospital	... Mysore	8,79,095
45	Cheluvamba Hospital	... do	4,10,346
46	P. K. Sanatorium	... do	4,74,821
47	Epidemic Diseases Hospital	... do	48,254
	15. North Kanara District—2.		
48	Civil Hospital	... Karwar	1,19,126
49	Cottage Hospital	... Bhatkal	31,333
	16. Raichur District—1.		
50	Headquarters Hospital	... Raichur	1,12,198
	17. Shimoga District—1.		
51	Mc'Gann Hospital	... Shimoga	2,91,074
	18. South Kanara District—7.		
52	Government Wenlock Hospital	... Mangalore	10,84,642
53	Lady Goschen Hospital	... do	2,36,294
54	T. B. Sanatorium	... Mudushedde	83,803
55	Government Hospital	... Coondapoor	62,590
56	Government Hospital	... Karkala	1,67,108
57	Government Hospital	... Puttur	89,485
58	Government Hospital	... Udipi	1,22,043
	19. Tumkur District—1.		
59	New General Hospital	... Tumkur	2,97,703

ಶ್ರೀ ಎ. ಜೆ. ದೊಡ್ಡಮೇಟಿ.—ನೀವು ಕೊಟ್ಟಿರುವ ಆಸ್ಪತ್ರೆಗಳ ಹೊರತಾಗಿ, ಗ್ರಾಮಾಂತರ ಪ್ರದೇಶದಲ್ಲಿ ಹೆಲ್ತ್ ಯೂನಿಟ್‌ಗಳು ವೈದ್ಯಕೀಯ ಸವಲತ್ತುಗಳು ಇರುವ ಇತರ ದವಾಖಾನೆಗಳು ಇವೆ. ಅಂಥವು ಎಷ್ಟು ಇವೆ ?

ಶ್ರೀ ಕೆ. ನಾಗಪ್ಪ ಆಳ್ವ.—ಈಗ ಕೊಟ್ಟದ್ದು ಸಂಪೂರ್ಣವಾಗಿ ಸರ್ಕಾರ ನಡೆಸುವಂಥಾದ್ದು, ಎಂದರೆ ದೊಡ್ಡ ಆಸ್ಪತ್ರೆಗಳು ಮಾತ್ರ. ಇದೂ ಅಲ್ಲದೆ ಆಯುರ್ವೇದ ಇನ್‌ಸ್ಟಿಟ್ಯೂಷನ್‌ಗಳು ಮತ್ತು ಯುನಾನಿ ಒಟ್ಟು 531. ಅಮೇಲೆ ಸಣ್ಣ ಆಸ್ಪತ್ರೆಗಳು ಎಂದರೆ, ಪ್ರೈಮರಿ ಹೆಲ್ತ್ ಯೂನಿಟ್ ಟೈಪ್ ಡಿಸ್ಪೆನ್ಸರೀಸ್, ಕಂಬೈನ್ಡ್ ಡಿಸ್ಪೆನ್ಸರೀಸ್, ಎಫ್. ಎಫ್. ಡಿಸ್ಪೆನ್ಸರೀಸ್, ಮುನಿಸಿಪಲ್ ಡಿಸ್ಪೆನ್ಸರೀಸ್, ಫಾರೆಸ್ಟ್ ಡಿಸ್ಪೆನ್ಸರೀಸ್, ಮೊಬೈಲ್ ಡಿಸ್ಪೆನ್ಸರೀಸ್ ಮುಂತಾದ 13 ತರಹದ್ದು ಒಂದು ಸಾವಿರ ಇನ್‌ಸ್ಟಿಟ್ಯೂಷನ್ ಇವೆ.

ಶ್ರೀ ಎ. ಜೆ. ದೊಡ್ಡಮೇಟಿ.—ಸಾಮಾನ್ಯವಾಗಿ ಸರ್ಕಾರವು ಧೋರಣೆ ಪ್ರಕಾರ 15 ಸಾವಿರ ಜನರಿಗೆ ಒಂದು ಆರೋಗ್ಯ ಕೇಂದ್ರ ಇರಬೇಕಾಗಿತ್ತು. 15 ಸಾವಿರಕ್ಕೆ ಒಂದು ಕೇಂದ್ರದಂತೆ ಪೂರ್ತಿ ಇವೆಯೋ ಅಥವಾ ಕಡಿಮೆ ಬಿದ್ದರೆ ಎಷ್ಟು ಬೇಕು ?

ಶ್ರೀ ಕೆ. ನಾಗಪ್ಪ ಆಳ್ವ.—ಎಲ್ಲೆಲ್ಲಿ ಆಸ್ಪತ್ರೆಗಳು, ವೈದ್ಯಕೀಯ ಅನುಕೂಲತೆಗಳು ಜನರಿಗೆ ಬೇಕಾಗಿದೆ ಎಂಬುದಕ್ಕೆ ಒಂದು ಯೋಜನೆ ಸರ್ಕಾರದ ಮುಂದೆ ಇದೆ. ಜನರ ಕೋರಿಕೆ ಬಂದ ರೀತಿಯಲ್ಲಿ ಎಲ್ಲಿ ಬೇಕೋ ಅದನ್ನು ಕೊಡುವುದಕ್ಕೆ ಸಿದ್ಧವಾಗಿದ್ದೇವೆ.

ಶ್ರೀ ಎ. ಜೆ. ದೊಡ್ಡಮೇಟಿ.—15 ಸಾವಿರ ಜನರಿಗೆ ಒಂದು ಆರೋಗ್ಯ ಕೇಂದ್ರ ಅಥವಾ ಆರೋಗ್ಯ ವ್ಯವಸ್ಥೆ ಇರಬೇಕು ಎಂದು ಹೇಳಿದ್ದೀರಿ. ಈ ಧೋರಣೆಯನ್ನು ಪೂರೈಸಲಿಕ್ಕೆ ಆಗಿದೆಯೇ ? ಆಗಿಲ್ಲದೇ ಇದ್ದರೆ ಎಷ್ಟು ದಿವಸಗಳಲ್ಲಿ ಆಗುತ್ತದೆ ?

ಶ್ರೀ ಕೆ. ನಾಗಪ್ಪ ಆಳ್ವ.—ಇದಕ್ಕೆ ಹೆಚ್ಚು ಸಮಯ ಬೇಕಾಗಿಲ್ಲ. 3-4 ವರ್ಷಗಳಲ್ಲಿ ಸಂಪೂರ್ಣವಾಗಿ ಆಸ್ಪತ್ರೆಗಳನ್ನು ಕೊಡುವುದಕ್ಕೆ ಸಾಧ್ಯವಿದೆ.

ಶ್ರೀ ಪೆಚ್. ಡಿ. ದೇವೇಗೌಡ.—ಬಡವರಿಗೆ ಔಷಧಿಗಳನ್ನು ಕೊಡುವುದಕ್ಕೆ ಇಷ್ಟು ಆಸ್ಪತ್ರೆಗಳನ್ನು ತೆರೆದಿದ್ದೇವೆ ಎಂದು ಹೇಳಿದ್ದೀರಿ ? ಬಡವರು ಎಂದು ಯಾವ ರೀತಿಯಲ್ಲಿ ಅವರ ಆರ್ಥಿಕ ಪರಿಸ್ಥಿತಿಯನ್ನು ನಿರ್ಧಾರ ಮಾಡುತ್ತೀರಿ ? ಯಾವ ರೀತಿ ಅವರಿಗೆ ಉಚಿತ ಸೌಲಭ್ಯ ಸಿಕ್ಕುತ್ತದೆ ಎಂದು ತಿಳಿಸಬೇಕು.

ಶ್ರೀ ಕೆ. ನಾಗಪ್ಪ ಆಳ್ವ.—ತಿಂಗಳಿಗೆ 150 ರೂಪಾಯಿಗಿಂತ ಕಡಿಮೆ ಆದಾಯ ಇರುವವರೆಲ್ಲರಿಗೂ ಉಚಿತವಾಗಿ ಟ್ರೀಟ್‌ಮೆಂಟ್ ಕೊಡುತ್ತಾ ಇದೆ.

ಶ್ರೀಮತಿ ನುಶೀಲಾಬಾಯಿ ಹೀರಾಚಂದ್ ಷಾ.—ಎಲ್. ಎಫ್. ಡಿಸ್ಪೆನ್ಸರಿ ಮತ್ತು ಚಿಕ್ಕ ಡಿಸ್ಪೆನ್ಸರಿಗಳಲ್ಲಿ ಎಲ್. ಎಮ್. ಪಿ. ಡಾಕ್ಟರುಗಳು ಎಷ್ಟು ಕಡೆ ಇಲ್ಲ ?

ಶ್ರೀ ಕೆ. ನಾಗಪ್ಪ ಆಳ್ವ.—ಕೆಲವು ಕಡೆಗಳಲ್ಲಿ ಇಲ್ಲ. ಎಷ್ಟು ಕಡೆಗಳಲ್ಲಿ ಎಂಬ ಸಂಖ್ಯೆ ನನ್ನಲ್ಲಿ ಈಗ ಇಲ್ಲ.

ಶ್ರೀಮತಿ ನುಶೀಲಾಬಾಯಿ ಹೀರಾಚಂದ್ ಷಾ.—ಬಾಗೇಪಾಡಿ ತಾಲ್ಲೂಕು ಡಿಸ್ಪೆನ್ಸರಿ ತೆಗೆದಿದ್ದೀರಿ. ಅಲ್ಲಿ ಡಾಕ್ಟರು ಇಲ್ಲ ಎಂದು ಗೊತ್ತಿದೆಯೇ ?

ಶ್ರೀ ಕೆ. ನಾಗಪ್ಪ ಆಳ್ವ.—ಆದಷ್ಟು ಬೇಗ ಅಲ್ಲಿ ಕೊಡುತ್ತೇವೆ.

ಶ್ರೀ ಸಿದ್ದಯ್ಯ ಕಾಶೀಮಠ್.—ಜನಸಂಖ್ಯೆ ಆಧಾರದ ಮೇಲೆ ನಮ್ಮ ರಾಜ್ಯದಲ್ಲಿ ಎಷ್ಟು ಆಸ್ಪತ್ರೆಗಳು ಬೇಕು ಎಂದು ಸರ್ವೆ ಮಾಡಿದ್ದೀರಾ ? ಹಾಗಿದ್ದರೆ ಎಷ್ಟು ಆಸ್ಪತ್ರೆಗಳು ಬೇಕು ?

ಶ್ರೀ ಕೆ. ನಾಗಪ್ಪ ಆಳ್ವ.—ಒಂದು ಸಾವಿರ ಜನಸಂಖ್ಯೆಗೆ ಒಂದು ಬೆಡ್ ನಮ್ಮ ಟಾರ್ಗೆಟ್ ಇದೆ. ಆದರೆ ನಮ್ಮ ಸಂಸ್ಥಾನದಲ್ಲಿ ಈಗ 8,000 ಜನಸಂಖ್ಯೆಗೆ ಒಂದು ಬೆಡ್ ಇದೆ.

ಶ್ರೀ ಎ. ಜೆ. ದೊಡ್ಡಮೇಟಿ.—ಉತ್ತರ ಕರ್ನಾಟಕ ತಾಲ್ಲೂಕು ಕೇಂದ್ರಗಳಲ್ಲಿ ಹಿಂದೆ ಜಿಲ್ಲಾ ಬೋರ್ಡಿನವರು ಕೆಲವು ಆಸ್ಪತ್ರೆಗಳನ್ನು ತೆಗೆದಿದ್ದಾರೆ. ಅವು ಎಲ್ಲಾ ಕೆಳಮಟ್ಟದಲ್ಲಿ ಇವೆ. ಅವನ್ನು ಮೇಲ್ಮಟ್ಟಕ್ಕೆ ಏರಿಸುವ ದೃಷ್ಟಿಯಿಂದ ಸರ್ಕಾರ ಆಲೋಚನೆ ಮಾಡುತ್ತಾರೆಯೇ ?

ಶ್ರೀ ಕೆ. ನಾಗಪ್ಪ ಆಳ್ವ.—ಮುಖ್ಯವಾಗಿ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿರುವ ಆಸ್ಪತ್ರೆಗಳನ್ನು ಅಲ್ಲಿಯ ಜನಸಂಖ್ಯೆ ಮತ್ತು ಜನತೆಯ ಅಗತ್ಯತೆ ನೋಡಿಕೊಂಡು ದೊಡ್ಡದು ಮಾಡಬೇಕು ಎಂಬ ಯೋಜನೆ ಸರ್ಕಾರದ ಮುಂದೆ ಇದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಆಸ್ಪತ್ರೆಗಳಲ್ಲಿ 150 ರೂಪಾಯಿ ಆದಾಯ ಒಳಗಿರುವವರಿಗೆಲ್ಲಾ ಬಣ್ಣ ಬಣ್ಣದ ನೀರು ಹಾಕಿದ ಔಷಧಿ ಕೊಟ್ಟರೆ ಯಾವುದಾದರೂ ಸಾಮಾನ್ಯ ಖಾಯಿಲೆ ವಾಸಿಯಾಗುತ್ತದೆ ಎಂಬ ನಂಬಿಕೆ ನಿಮಗೆ ಇದೆಯೇ ?

ಶ್ರೀ ಕೆ. ನಾಗಪ್ಪ ಆಳ್ವ.—ನೀವು ಹೇಳುವಂಥ ಕಲರ್ಡ್ ವಾಟರ್ ವಿಷಯ ಗೊತ್ತಿಲ್ಲ. ರೋಗಿಗಳ ರೋಗಗಳನ್ನು ಗುಣಪಡಿಸಿ ಅವರನ್ನು ಆರೋಗ್ಯವಂತರನ್ನಾಗಿ ಮಾಡಿ ಅವರ ಹಿತರಕ್ಷಣೆ ಮಾಡುತ್ತಾ ಇರುವುದು ನಮಗೆ ಗೊತ್ತಿದೆ.

Sri R. S. HEGDE.—Is it not the declared policy of the Government that there must be one health centre for every 8,000 to 9,000 population in malnad area ?

Sri K. NAGAPPA ALVA.—We have agreed.

(*Sri K. S. Suryanarayana Rao stood up to put supplementaries*)

Mr. SPEAKER.—To which party does the member belong ? I want to know it so that I may regulate supplementaries.

Sri K. S. SURYANARAYANA RAO.—I am on the Opposition, Sir. ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಖರ್ಚು ಮಾಡುವುದು ಸಾಲದು. ವೈದ್ಯಕೀಯ ಸೌಲಭ್ಯಗಳಿಗೆ ಈಗ ಕೊಡುತ್ತಾ ಇರತಕ್ಕಂಥ ಹಣ ಸಾಲದು ಎಂದು ಪದೇ ಪದೇ ಒತ್ತಾಯ ಬರಲಿಲ್ಲವೇ? ಅವರ ಬಗ್ಗೆ ಗಮನ ಏನಾದರೂ ಕೊಟ್ಟಿದ್ದೀರಾ?

ಶ್ರೀ ಕೆ. ನಾಗಪ್ಪ ಆಳ್ವ.—ಗೊತ್ತಿದೆ. ಅದಕ್ಕೆ ಬೇಕಾದ ಹಣವನ್ನು ಖರ್ಚು ಮಾಡುತ್ತಾ ಇದ್ದೇವೆ.

Sri K. P. GADAG.—May I know, Sir, whether there are any hospitals in old Mysore run by Municipality?

Sri K. NAGAPPA ALVA.—Usually there is what is called the assistance pattern. Like that only we are having almost all over the State local fund or municipal dispensary.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಬೆಂಗಳೂರಿನಲ್ಲಿರುವ ಆಸ್ಪತ್ರೆಗಳಿಗೇ 60 ಲಕ್ಷ ರೂಪಾಯಿ ಖರ್ಚುಮಾಡಿ ಇತರ ಕಡೆಗಳಿಗೆ 68 ಲಕ್ಷ ಖರ್ಚು ಮಾಡಿದ್ದೀರಿ. ಹೀಗಿರುವಾಗ ಬೆಂಗಳೂರಿನಲ್ಲಿರುವ ಬಡವರಿಗೆ ಎಷ್ಟು ವೈದ್ಯಕೀಯ ಸೌಲಭ್ಯ ಸಿಕ್ಕಿದೆ?

ಶ್ರೀ ಕೆ. ನಾಗಪ್ಪ ಆಳ್ವ.—ಮುಖ್ಯವಾಗಿ ಬಡವರಿಗೆ ಬೇಕಾದ್ದಕ್ಕಿಂತ ಹೆಚ್ಚು ಅನುಕೂಲವಾಗಿದೆ.

ಶ್ರೀಮತಿ ನಾಗರತ್ನಮ್ಮ ಹಿರೇಮಠ್.—ಬಡವರಿಗೆ ಒಂದು ಬೆಡ್ಡಿಗೆ 10 ರೂಪಾಯಿ ಕೊಡ ಬೇಕೆಂದು ಹೇಳಿ ಅವರಿಂದ ವಸೂಲುಮಾಡುತ್ತಿರುವಾಗ ಅವರಿಗೆ ಉಚಿತವಾಗಿ ಸಹಾಯ ಮಾಡುತ್ತಿರುವುದು ಹೇಗೆ?

ಶ್ರೀ ಕೆ. ನಾಗಪ್ಪ ಆಳ್ವ.—ಹಾಗೆ ಬಡವರಿಂದ ವಸೂಲುಮಾಡುವುದು ನಿಜವಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಬೇಕಾದರೆ ತೋರಿಸುತ್ತೇನೆ. ನಾನು ಯಾವಾಗಲೂ ನಿಜವಲ್ಲದಿರುವುದನ್ನು ಹೇಳುವುದಿಲ್ಲ.

ಶ್ರೀ ಎಸ್. ಶಿವಪ್ಪ.—ಸರಕಾರ ತೆರೆದಿರುವ ಆಸ್ಪತ್ರೆಗಳಲ್ಲಿ ಸಾಕಷ್ಟು ವೈದ್ಯರಿಲ್ಲದೆ ಚಿಕಿತ್ಸೆಗೆ ತೊಂದರೆಯಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಕೆ. ನಾಗಪ್ಪ ಆಳ್ವ.—ಕೆಲವು ಕಡೆ ಹಾಗಾಗಿದೆ, ಡಾಕ್ಟರುಗಳ ಅಭಾವ ಇದೆ.

ಶ್ರೀಮತಿ ಬಿ. ಬಸವರಾಜೇಶ್ವರಿ.—ರಾಯಚೂರಿನ ಹೆಡ್‌ಕ್ವಾರ್ಟರ್ಸ್ ಆಸ್ಪತ್ರೆಯಲ್ಲಿ 5 ಜನರನ್ನು ಅಸಿಸ್ಟೆಂಟ್ ಲೆಕ್ಚರರುಗಳಾಗಿ ಪೋಸ್ಟ್ ಮಾಡಿದ ಮೇಲೆ ಬೇರೆಯವರನ್ನು ಅವರ ಜಾಗಕ್ಕೆ ಪೋಸ್ಟ್ ಮಾಡದಿರುವುದು ಮತ್ತು ಅಲ್ಲಿ ರೇಡಿ ಡಾಕ್ಟರಿಲ್ಲದಿರುವುದು ಗಮನಕ್ಕೆ ಬಂದಿದೆಯೇ?

ಶ್ರೀ ಕೆ. ನಾಗಪ್ಪ ಆಳ್ವ.—ಆ ವಿಷಯವನ್ನು ಎರಡು ದಿನಗಳ ಕೆಳಗೆ ನನಗೆ ತಿಳಿಸಿದ್ದಾರೆ, ಸೂಕ್ತ ಕ್ರಮ ಕೈಕೊಳ್ಳುತ್ತೇವೆ.

ಶ್ರೀ ಎಸ್. ಗೋಪಾಲ ಗೌಡ.—ಹಳೇ ಮದ್ರಾಸು ರಸ್ತೆಯಲ್ಲಿರುವ ಟಿ. ಬಿ. ಆಸ್ಪತ್ರೆಯಲ್ಲಿ ಒಬ್ಬ ಮ್ಯಾನೇಜರು ಅಕ್ಕಿ, ಔಷಧಿ ಮುಂತಾದ್ದನ್ನು ದುರುಪಯೋಗಪಡಿಸುತ್ತಿದ್ದಾರೆಂದು ಅಲ್ಲಿನ ರೋಗಿಗಳು ಬಹಳ ಹಿಂದೆ ಒಂದು ಅರ್ಜಿ ಕೊಟ್ಟಿದ್ದರಲ್ಲವೇ?

ಶ್ರೀ ಕೆ. ನಾಗಪ್ಪ ಆಳ್ವ.—ಬಹಳ ಹಿಂದೆ ಅಲ್ಲ, ಇತ್ತೀಚೆಗೆ ಕೊಟ್ಟಿದ್ದಾರೆ. ಅದರ ವಿಷಯ ತನಿಖೆ ಮಾಡುತ್ತಿದ್ದೇವೆ.

ಶ್ರೀ ಎ. ಜೆ. ದೊಡ್ಡ ಮೇಟಿ.—ಡಾಕ್ಟರಿಲ್ಲದಿರುವ ದವಾಖಾನೆಗಳೆಷ್ಟಿವೆ?

ಶ್ರೀ ಕೆ. ನಾಗಪ್ಪ ಆಳ್ವ.—ಸಾಧಾರಣವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ 1,600 ಆಸ್ಪತ್ರೆಗಳಿವೆ. ಅದರಲ್ಲಿ ಸುಮಾರು 150 ರಿಂದ 200 ಆಸ್ಪತ್ರೆಗಳಲ್ಲಿ ಡಾಕ್ಟರುಗಳಿಲ್ಲ. ಅಲ್ಲಿಗೆ ಬೇರೆ ಆಸ್ಪತ್ರೆಗಳಿಂದ ಡಾಕ್ಟರುಗಳು ಹೋಗುತ್ತಾರೆ.

— ——